ಮಾಡಿದರು ಗಾಡಿ ಕಮಕ್ ಕಿಮಕ್ ಎನ್ನಲಿಲ್ಲ. ಸಕಲ ಪ್ರಯತ್ನಗಳೂ ವಿಫಲವಾದ ನಂತರ ಹತ್ತಿರದ ಗ್ಯಾರೇಜೊಂದಕ್ಕೆ ಮೊಪೆಡ್ಡನ್ನು ತಳ್ಳಿಕೊಂಡು ಹೋದ ಗುರುರಾಜನಿಗೆ ಅನಿರೀಕ್ಷಿತ ವೇಷದಲ್ಲಿ ಗೋವಿಂದ ಸಿಕ್ಕ. ಮುಖ, ಮೂತಿಗೆಲ್ಲಾ ಆಯಿಲ್ಲು ಹಿಡಿಸಿಕೊಂಡು, ಕೈಯಲ್ಲೊಂದು ಚಪ್ಪು ಬಟ್ಟೆ ಹಿಡಿದುಕೊಂಡಿದ್ದ ಗೋವಿಂದ ಹಲ್ಲು ಕಿರಿಯುತ್ತಾ, "ಹದಿನೈದು ದಿನವಾಯ್ತು, ದೇವಸ್ಥಾನ ಬಿಟ್ಟೆ" ಎಂದ. ಅಣ್ಣನ ಅವಸ್ಥೆಯನ್ನು ಕಂಡು ಅವಾಕ್ಕಾದ ಗುರುರಾಜ ಮೆತ್ತಗೆ ಅವನನ್ನು ಪಕ್ಕಕ್ಕೆ ಕರೆದು ಆಗುಹೋಗುಗಳನ್ನು ವಿಚಾರಿಸಿದ. ಮೊದಮೊದಲು ಹೇಳಲು ಹಿಂಜರಿದವನು, ಗುರುರಾಜ ಪದೇ ಪದೇ ಕೇಳಿದಾಗ ಒಂದೊಂದಾಗಿ ವಿವರಿಸಿದ. ದೇವಸ್ಥಾನದ ಹುಂಡಿ ಕಳುವಾಗಿದ್ದು, ಮಾರನೇ ದಿನವೇ ದೇವಸ್ಥಾನದ ಕಮಿಟಿಯವರು ಸಭೆ ನಡೆಸಿ ಕಳ್ಳತನದ ಬಗ್ಗೆ ವಿಚಾರಿಸಿದ್ದು, ಪೂಜೆ ಭಟ್ಟರಲ್ಲದೇ ಇನ್ಯಾರು ಹುಂಡಿ ಮುಟ್ಟಲು ಸಾಧ್ಯ ಎಂದು ಗೋವಿಂದನ ಮೇಲೆಯೇ ಕಳ್ಳತನದ ಆರೋಪ ಹೊರಿಸಿದ್ದು ನಂತರ ಮನೆಗೆ ನುಗ್ಗಿ ಇದ್ದಬದ್ದ ದುಡ್ಡನ್ನೆಲ್ಲಾ ಬಾಚಿಕೊಂಡು ಹೋಗಿದ್ದು ಹೀಗೆ ನಡೆದದ್ದನ್ನೆಲ್ಲಾ ಗುರುರಾಜನ ಮುಂದೆ ತೆರೆದಿಟ್ಟ. ಬಿಟ್ಟ ಕಣ್ಣು ಬಿಟ್ಟಂತೆಯೇ ನಿಂತ ಗುರುರಾಜ ತಣ್ಣಗೆ ಗೋವಿಂದನ ಕೈ ಹಿಡಿದು, "ಗೋವೀ ನಿಜ ಹೇಳು, ನೀ ಕದ್ಯಾ?" ಎಂದು ಕೇಳಿದ್ದಕ್ಕೆ ಇಲ್ಲವೆಂಬಂತೆ ತಲೆಯಾಡಿಸಿದ. ಗೋವಿ ಎನ್ನುವುದು ಗೋವಿಂದನಿಗಿದ್ದ ಅಡ್ಡ ಹೆಸರು. ಚಿಕ್ಕ ವಯಸ್ಸಿನಲ್ಲಿ ಅಪರೂಪಕ್ಕೆಲ್ಲೋ ಗುರುರಾಜ ಅವನನ್ನು ಹಾಗೆ ಕರೆದಿದ್ದು ಬಿಟ್ಟರೆ, ಈಗ ಗ್ಯಾರೇಜಿನ ಮುಂದೆಯೇ, ಮೈ ಕೈಗೆಲ್ಲಾ ಮಸಿ ಬಳಿದುಕೊಂಡ ನಿಂತ ಅಣ್ಣನನ್ನು ನೋಡಿದಾಗಲೇ ಗೋವಿ ಎಂಬ ಹೆಸರು ಅವನಿಗೆ ಅರಿವಿಲ್ಲದೆಯೇ ಬಾಯಿಯಿಂದ ಹೊರಬಿದ್ದಿದ್ದು. ಗೋವಿ ಎಂದು ಕೇಳಿದ್ದೇ ತಡ ಗೋವಿಂದನಿಗೆ ಕಳೆದುಕೊಂಡ ಅತ್ಯಮೂಲ್ಯ ವಸ್ತುವೊಂದು ಮರಳಿ ಸಿಕ್ಕಂತಾಗಿ ಕಣ್ಣು ಹೊಳಪಾಗಿತ್ತು. "ಇಷ್ಟೆಲ್ಲಾ ನಡೆದರೂ ನನ್ನ ನೆನಪಾಗಲಿಲ್ಲವಾ, ನನ್ನ ಹತ್ತಿರ ಬಂದು ಒಂದು ಮಾತು ಹೇಳಬಾರದಿತ್ತಾ" ಎಂದು ಗುರುರಾಜ ಕೇಳಿದ. ಹೊಳಪು ಕಣ್ಣಿನ ಗೋವಿಂದ ಯಥಾಪ್ರಕಾರ ಹಲ್ಲು ಕಿರಿದ. "ಊಟಕ್ ಏನ್ ಮಾಡ್ತೀಯ" ಎಂದಾಗ ಮತ್ತೆ ಹಲ್ಲು ಕಿರಿದ. "ನಾಳೆಯಿಂದ ಈ ಕೆಲಸ ಮಾಡೋದು ಬೇಡ ನೀನು. ನನ್ನ ಪರಿಚಯದವರೊಬ್ಬರು ಪೌರೋಹಿತ್ಯ ಮಾಡ್ತಾರೆ, ಅವರತ್ರ ಮಾತಾಡ್ತೀನಿ, ಅಲ್ಲೀ ತನಕ ಮನೆಯಲ್ಲೇ ಇರು. ದುಡ್ ಬೇಕಾದ್ರೆ ನಾನೇ ಕೊಡ್ತೀನಿ" ಅಂದ. ಅವನು ತಲೆಯಲ್ಲಾಡಿಸಿದ.

ಗುರುರಾಜ ಎಂದಿಗೂ ಅಣ್ಣನ ಬಗ್ಗೆ ತಲೆಕೆಡಿಸಿಕೊಂಡವನಲ್ಲ. ಆದರೆ, ಅಂದು ಅಚಾನಕ್ಕಾಗಿ ಸಿಕ್ಕ ಅಣ್ಣನ ಅವಸ್ಥೆಯನ್ನು ಕಂಡಾಗ ಕರುಳು ಚುರ್ ಎನಿಸಿ, ಅಣ್ಣನಿಗೆ ತುತ್ತು ಅನ್ನ ಹಾಕದಿದ್ದರೆ ಅಪ್ಪಅಮ್ಮನ ಆತ್ಮಕ್ಕೆ ಶಾಂತಿ ದಕ್ಕಲಾರದು ಎಂದೆನಿಸಿತು. "ಗೋವಿ, ದಿನಾ ತಿಂಡಿ ಮತ್ತೆ ಊಟಕ್ಕೆ ಮನೆಗೆ ಬಾ, ಅದರಲ್ಲೇನೂ ದಾಕ್ಷಿಣ್ಯ ಬೇಡ" ಎಂದ. ಈ ಬಾರಿ ಗೋವಿ ಎನ್ನುವಾಗ ಗುರುರಾಜ ಒಂಚೂರು ಸಡಿಲಗೊಂಡಿದ್ದ. ಅಮ್ಮ ಸತ್ತ ನಂತರ ರುಚಿ ಕೆಟ್ಟಂತಾಗಿದ್ದ ಗೋವಿಂದನ ನಾಲಗೆ ತಮ್ಮನ ಮಾತು ಕೇಳುತ್ತಲೇ ಚುರುಕಾಯಿತು. ಒಂದೇ ಏಟಿಗೆ ಒಪ್ಪಿಕೊಳ್ಳುವುದು ಬೇಡವೆಂದು ಮನಸ್ಸು ಹೇಳುತ್ತಿದ್ದರೂ ಮಾತು ಕೇಳದ ನಾಲಗೆ, "ಅತ್ತಿಗೆ ಕೈ ರುಚಿ ತಿನ್ನೋ ಯೋಗ ಇದ್ದರೆ ಅದೂ ಆಗ್ಲಿ. ನಾಳೆಯಿಂದ ಬರ್ತೀನಿ" ಅಂದುಬಿಟ್ಟಿತು. ಗೋವಿಂದ ಮಾತನಾಡುವುದೇ ಹಾಗೆ, ಯಾವುದನ್ನೂ ನೇರವಾಗಿ ಒಂದೇ ಪದದಲ್ಲಿ ಹೇಳುವ ಅಭ್ಯಾಸವೇ ಇಲ್ಲ. ಒಂದೋ ಹಲ್ಲು ಕಿರಿಯುತ್ತಾ ನಿಲ್ಲುವುದು ಅಥವಾ ಅನವಶ್ಯಕ ವಿವರಣೆಗಳನ್ನೆಲ್ಲಾ ಕೊಟ್ಟು ಕೊನೆಗೆ ಉತ್ತರ ನೀಡುವುದು. ಅಷ್ಟರಲ್ಲಾಗಲೇ ಗ್ಯಾರೇಜಿನ ಹುಡುಗ ಮೊಪೆಡ್ಡನ್ನು ಆನ್ ಮಾಡಿ "ಕಿರ್ರೋಂ" ಎಂದು ಕೂಗಿಸಿದ, ಅದರ ಬಾಬ್ತಿನ ಜೊತೆಗೆ ಅಣ್ಣನ ಜೇಬಿಗೂ ಐವತ್ತರ ಒಂದು ನೋಟು ತುರುಕಿದ ಗುರುರಾಜ. ಗೋವಿಂದನಿಗೆ ಹತ್ತಿರದ ಟಿಫನ್ ಸೆಂಟರಿನಲ್ಲಿ ತಿಂಡಿ ತಿನ್ನಿಸಿ, ಹಳೇ ಮನೆಗೆ ಹತ್ತಿರದ ಸರ್ಕಲ್‌ನಲ್ಲಿ ಬಿಟ್ಟು, ಬ್ಯಾಂಕಿನ ಕಡೆ ಹೊರಟ.